# ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ , ಉಡುಪಿ ಜಿಲ್ಲೆ , ಉಡುಪಿ

**ಸೆಷನ್ಸ್ ಕೇಸ್ ನಂಃ 8/2025** **ಪಿಡಬ್ಲ್ಯೂಃ 9**
**ಸಿ.ಡಬ್ಲ್ಯೂಃ11**

| | | |
|---|---|---|
| ಸಾಕ್ಷಿದಾರರ ಹೆಸರು | - | ಸುರೇಶ್ ಪೂಜಾರಿ |
| ತಂದೆಯ ಹೆಸರು | - | ಗೊಂಕು ಪೂಜಾರಿ |
| ವಯಸ್ಸು | - | 64 ವರ್ಷ |
| ಉದ್ಯೋಗ | - | ನಿವೃತ್ತರು |
| ವಿಳಾಸ | - | ಬೈಲೂರು. |

ದಿನಾಂಕಃ 07-02-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ**

ಚಾಸಾ1 ರವರ ಪರಿಚಯ ಇದೆ. ಮೃತ ಪ್ರಶಾಂತ್ ನ ಪರಿಚಯ ಇದೆ. ಆತ ಚಾಸಾ1 ರವರ ತಮ್ಮ. ಆತ ಸುಮಾರು ಒಂದು ವರ್ಷದ ಹಿಂದೆ ಕೊಲೆಯಾಗಿರುತ್ತಾನೆ. ಆತನ ಶವವನ್ನು ನೋಡಲು ನಾನು ಮಣಿಪಾಲದ ಕೆಎಂಸಿ ಆಸ್ಪತ್ರೆಗೆ ಹೋಗಿದ್ದೆ. ಆ ಸಮಯಲ್ಲಿ ಪೋಲಿಸರು ಶವಗಾರದಲ್ಲಿ ಮೃತ ಪ್ರಶಾಂತನ ಶವವನ್ನು ಪರಿಶೀಲಿಸಿರುತ್ತಾರೆ. ಆತನ ದೇಹದ ಮೇಲೆ ಗಾಯಗಳು ಇದ್ದು, ಕುತ್ತಿಗೆಯ ಬಳಿ ತೀವ್ರ ಸ್ವರೂಪದ ಗಾಯ ಇತ್ತು. ಸದ್ರಿ ಶವವನ್ನು ಪರಿಶೀಲಿಸಿದಾಗ ಅದು ಕೊಲೆ ಎಂದು ನಾನು ಅಭಿಪ್ರಾಯ ಪಟ್ಟಿರುತ್ತೇನೆ. ಈ ಬಗ್ಗೆ ಪೋಲಿಸರು ಶವ ಪಂಚನಾಮೆ ತಯಾರಿಸಿರುತ್ತಾರೆ. ಸದ್ರಿ ಶವ ಪಂಚನಾಮೆಗೆ ನಾನು ಸಹಿ ಮಾಡಿರುತ್ತೇನೆ. ಅದನ್ನು ನಿಪಿ-13 ಎಂದು, ಸಾಕ್ಷಿಯ ಸಹಿಯನ್ನು ನಿಪಿ-13(ಎ) ಎಂದು ಗುರುತಿಸಲಾಯಿತು.

ಶವ ಪಂಚನಾಮೆಯ ಕಾಲದಲ್ಲಿ ಛಾಯಾ ಚಿತ್ರ ತೆಗೆದಿದ್ದು, ಎಂಟು ಛಾಯಾ ಚಿತ್ರಗಳನ್ನು ಒಟ್ಟಾಗಿ ನಿಪಿ-14 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಆರ್.ಪಿ. ವಕೀಲರಿಂದಃ**

ನಿಪಿ-13 ಕ್ಕೆ ಬೇರೆ ಯಾರು ಸಹಿ ಮಾಡಿದ್ದಾರೆ ಗೊತ್ತಿಲ್ಲ. ನಾನು ಸಹಿ ಮಾಡುವಾಗ ಬೇರೆ ಯಾರೂ ಇರಲಿಲ್ಲ. ಪೋಲಿಸರ ಕೋರಿಕೆ ಮೇರೆಗೆ ಸಹಿ ಮಾಡಿರುತ್ತೇನೆ. ನಿಪಿ-13 ತಯಾರಿಸಲು ನಾನು ಮಾಹಿತಿ ಕೊಟ್ಟಿಲ್ಲ. ಶವದ ಮೇಲೆ ಎಲ್ಲೆಲ್ಲಿ ಗಾಯಗಳು ಆಗಿದ್ದವು ಎಂದು ನಿಖರವಾಗಿ ಹೇಳಲು ಆಗುವುದಿಲ್ಲ. ನಿಪಿ-13 ಕ್ಕೆ ಸಹಿ ಮಾಡಿದಾಗ ರಾತ್ರಿ 8 ಗಂಟೆಯಾಗಿತ್ತು. ಕೊಲೆ ಯಾರು ಮತ್ತು ಯಾಕೆ ಮಾಡಿದ್ದಾರೆ ಎಂದು ಗೊತ್ತಿಲ್ಲ. ನಿಪಿ-13 ಕ್ಕೆ ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಶವ ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ. ನಿಪಿ-14 ಭಾವಚಿತ್ರಗಳನ್ನು ಯಾರು ಯಾವ ಸಾಧನದಿಂದ ತೆಗೆದಿದ್ದಾರೆ ಗೊತ್ತಿಲ್ಲ. ನಿಪಿ-14 ನ್ನು ಪ್ರಕರಣಕ್ಕಾಗಿ ಸೃಷ್ಟಿ ಮಾಡಲಾಗಿದೆ ಎಂದರೆ ಸರಿಯಲ್ಲ. ಪೋಲಿಸರ ಹೇಳಿಕೆ ಮೇರೆಗೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉಡುಪಿ